# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಕ್ಷಿಣ ವಲಯ

**ಪಟ್ಟಾಭಿರಾಮನಗರ, ವಾರ್ಡ ಸಂಖ್ಯೆ: 168**

**ದಿನಾಂಕ: 05.08.2022 ರಂದು ವಾರ್ಡ ಸಂಖ್ಯೆ 168 ಪಟ್ಟಾಭಿರಾಮ ನಗರ ವಾರ್ಡನಲ್ಲಿ ನಡೆದ ವಾರ್ಡ ಸಮಿತಿ ಸಭೆ:**

**-: ಸಮಿತಿ ಸಭೆಯ ನಡವಳಿಗಳು :-**

ವಾರ್ಡ ಸಮಿತಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ಮತ್ತು ವಾರ್ಡ 168 ಸಾರ್ವಜನಿಕರು

| ಕ್ರಸಂ | ಹೆಸರು | ಹುದ್ದೆ |
|---|---|---|
| 01 | ಶ್ರೀಮತಿ ಶಶಿಕಲಾ ಟಿ. ಜೆ | ಅಧ್ಯಕ್ಷರು ವಾರ್ಡ-168 ರ ಸಮಿತಿ ಸಭೆ ಹಾಗೂ ನೋಡಲ್ ಅಧಿಕಾರಿಗಳು ಮತ್ತು ಸ.ಕಾ.ನಿ.ಅ ಘನತ್ಯಾಜ್ಯ ಜಯನಗರ ವಿಭಾಗ , ಬಿ.ಬಿ.ಎಂ.ಪಿ |
| 02 | ಶ್ರೀ ಚಂದ್ರಶೇಖರ್. ವಿ | ಕಾರ್ಯಾದರ್ಶಿ ಮತ್ತು ಸಂಚಾಲಕರು ವಾರ್ಡ-168 |
| 03 | ಶ್ರೀ ಹುಸೇನ್ ಎಂ.ಎ | ASI, ಮೈಕೋ ಸಂಚಾರ ಪೋಲಿಸ್ ಠಾಣೆ |
| 04 | ಶ್ರೀ ರಾಮಚಂದ್ರ .ಸಿ | ಹಿರಿಯ ಆರೋಗ್ಯ-168 ನಿರೀಕ್ಷಕರು, ಬಿ.ಬಿ.ಎಂ.ಪಿ |
| 05 | ಶ್ರೀ ನಾಗರಾಜು .ಎಸ್ | SWM, ಬಿ.ಬಿ.ಎಂ.ಪಿ ಜಯನಗರ |
| 06 | ಶ್ರೀ ಅಬ್ದುಲ್ | ASI, ತಿಲಕ್‌ನಗರ ಪೋಲಿಸ್ ಠಾಣೆ |
| 07 | ಶ್ರೀ ಗೌತಮ್ .ವೈ | ಕಿರಿಯ ಆರೋಗ್ಯ-168 ನಿರೀಕ್ಷಕರು, ಬಿ.ಬಿ.ಎಂ.ಪಿ |
| 08 | ಶ್ರೀ ಮಂಜುನಾಥ್ ಕೆ.ಸಿ | ಆರೋಗ್ಯ ನಿರೀಕ್ಷಕರು, ಬಿ.ಬಿ.ಎಂ.ಪಿ |
| 09 | ಶ್ರೀ ವಿಜಯ್ | T.I , ವಾರ್ಡ-168 ಬಿ.ಬಿ.ಎಂ.ಪಿ |
| 10 | ಶ್ರೀ ಗೀರಿಶ್ | T.I , ವಾರ್ಡ-168 ಬಿ.ಬಿ.ಎಂ.ಪಿ |
| 11 | ಶ್ರೀ ಹರಿಪ್ರಸಾದ್.ಅರ್ | WI, BWSSB ಜಯನಗರ |
| 12 | ಶ್ರೀ ಸಜ್ಜಪ್ಪ .ಬಿ | SWM, ಬಿ.ಬಿ.ಎಂ.ಪಿ ಜಯನಗರ |
| 13 | ವಾರ್ಡ 168 ರ ಸ್ಥಳಿಯ ನಿವಾಸಿಗಳ ಸಂಘ ಮತ್ತು ನಾಗರೀಕರು | |

ವಾರ್ಡ ಸಮಿತಿ ಅಧ್ಯಕ್ಷರು ಸಭೆಗೆ ಹಾಜರಿದ್ದ ಎಲ್ಲಾ ಸಾರ್ವಜನಿಕರಿಗೆ ಮತ್ತು ಅಧಿಕಾರಿ ವರ್ಗದವರಿಗೆ ಸ್ವಾಗತ ಕೋರುತ್ತಾ , ಸಭೆಯನ್ನು ಪ್ರಾರಂಭಿಸಿದರು.

1. ಮಾನ್ಯ ನೋಡಲ್ ಅಧಿಕಾರಿಗಳು ಮಾತನಾಡುತ್ತಾ ದಿನಾಂಕ 18.07.2022 ರಂದು ಸಾರ್ವಜನಿಕರು ತಿಳಿಸಿದ ಸಮಸ್ಯೆಗಳ ಬಗ್ಗೆ ಹಾಗೂ ಅಧಿಕಾರಿಗಳು ತೆಗೆದುಕೊಂಡ ಕ್ರಮದ ಮಾಹಿತಿ ಪಡೆದುಕೊಂಡರು.

2. ವಾರ್ಡ ಸಂಖ್ಯೆ 168ರ ವ್ಯಾಪ್ತಿಯಲ್ಲಿರುವ ಜಯನಗರ 5ನೇ ಮುಖ್ಯರಸ್ತೆ ಯಲ್ಲಿರುವ ವಾರಸುದಾರರಿಲ್ಲದ (ಬಿಡಾಡಿ) ವಾಹನಗಳಿದ್ದು . ಸದರಿ ವಾಹನಗಳನ್ನು ತೆರವುಗೂಳಿಸುವಂತೆ ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ, ಜಯನಗರ ಉಪ-ವಿಭಾಗ ಬಿ.ಬಿ.ಎಂ.ಪಿ & ಜಯನಗರ ಸಂಚಾರ ಪೋಲಿಸ್ ಠಾಣೆ)**

3. ಜಯನಗರ 4ನೇ 'ಟಿ' ಬ್ಲಾಕ್‌ನಲ್ಲಿರುವ ವಿಷ್ಣುವರ್ಧನ್ ಪಾರ್ಕನ ಮರಗಳಲ್ಲಿರುವ ಒಣಗಿದ ಕೊಂಬೆಗಳು ಮತ್ತು ಮರದ ಉದ್ದವಾಗಿರುವ ಕೊಂಬೆಗಳು ಬೀಳುವ ಸ್ಥಿತಿಯಲ್ಲಿದ್ದು. ಅಂತಹ ಕೊಂಬೆಗಳನ್ನು ಕತ್ತರಿಸಿ ತೆಗೆಯುವಂತೆ ಸಭೆಯಲ್ಲಿ ಕೋರಿದರು. **(ಅರಣ್ಯ ಇಲಾಖೆ (ದಕ್ಷಿಣ) ಬಿ.ಬಿ.ಎಂ.ಪಿ ಜಯನಗರ)**

Scanned with CamScanner

4. ಜಯನಗರ 4ನೇ 'ಟಿ' ಬ್ಲಾಕ್‌ನಲ್ಲಿರುವ ವಿಷ್ಣುವರ್ಧನ್ ಪಾರ್ಕನಲ್ಲಿ ಹೊಸದಾಗಿ ಮಳೆ ನೀರಿನ ಇಂಗು ಗುಂಡಿ (Rain water Harvesting pits) ಅನ್ನು ನಿರ್ಮಿಸಲು ಸಭೆಯಲ್ಲಿ ಕೋರಿದರು. **(ತೋಟಗಾರಿಕೆ ಇಲಾಖೆ (ದಕ್ಷಿಣ) ಮತ್ತು ಯೋಜನೆ(ದಕ್ಷಿಣ) ಬಿ.ಬಿ.ಎಂ.ಪಿ ಜಯನಗರ)**

5. ವಾರ್ಡ ಸಂಖ್ಯೆ 168 ರ ವ್ಯಾಪ್ತಿಯ ಬರುವ ಪಾದಚಾರಿ ಮಾರ್ಗದ ಮೇಲೆ ಪೆಟ್ಟಿ ಅಗಂಡಿಗಳನ್ನು ಇಟ್ಟುಕೊಂಡು ವ್ಯಾಪರ ಮಾಡುತ್ತಿದ್ದು ಇದರಿಂದ ಸಾರ್ವಜನಿಕರ ಸಂಚಾರಕ್ಕೆ ತೊಂದರೆ ಆಗುತ್ತಿದ್ದು. ಕೂಡಲೇ ಪಾದಚಾರಿ ಮಾರ್ಗದ ಮೇಲೆ ಇಟ್ಟಿರುವ ಪೆಟ್ಟಿ ಅಗಂಡಿಗಳನ್ನು ತೆರೆವುಗೊಳ್ಳಿಸಲು ಸಭೆಯಲ್ಲಿ ಕೋರಿದರು. **(ಕ್ರಮ: ಆರೋಗ್ಯಾಧಿಕಾರಿಗಳು, ಬಿ.ಬಿ.ಎಂ.ಪಿ ಜಯನಗರ)**

6. ವಾರ್ಡ ಸಂಖ್ಯೆ 168 ರ ವ್ಯಾಪ್ತಿಯ 'ಜಯನಗರ ಮೇಟ್ರೋ ನಿಲ್ದಾಣ'ದ ಹತ್ತಿರ ಆಟೋ ನಿಲ್ದಾಣವಿದ್ದು. ಅಲ್ಲಿನ ಆಟೋ ಮಾಲೀಕರು ಟ್ರಾಫಿಕ್ ನಿಮಯವಳಿಗಳನ್ನು ಪಾಲಿಸದೆ, ಮೇಟ್ರೋ ಸಂಚಾರಿಗಳಿಂದ ಬಾಡಿಗಿಗೆ ಹೆಚ್ಚಿನ ಹಣ ಪಡೆಯುತ್ತಾರೆ ಹಾಗೂ ಸಾರ್ವಜನಿಕರೊಂದಿಗೆ ಅಸಭ್ಯ ವರ್ತನೆಯಿಂದ ನಡೆದುಕೊಳ್ಳತ್ತಿದ್ದು ಮತ್ತು ಇಲ್ಲಿ ಉದ್ಯಾನವನವಿದ್ದು ರಾತ್ರಿ ವೇಳೆಯಲ್ಲಿ ಕೆಲವು ಅನಾಮದೇಯ ವ್ಯಕ್ತಿಗಳಿಂದ ಕಾನೂನು ಬಾಹಿರ ಚಟುವಟಿಕೆ ಹಾಗೂ ಅಸಭ್ಯ ವರ್ತನೆ ತೋರುತ್ತಿದ್ದು. ಇದರ ಬಗ್ಗೆ ಸಂಬಂಧ ಪಟ್ಟ ಇಲಾಖೆಯವರು ಕ್ರಮ ವಹಿಸಲು ಸಭೆಯಲ್ಲಿ ಕೋರಿದರು. **(ಜಯನಗರ ಪೋಲಿಸ್ ಠಾಣೆ ಮತ್ತು ಜಯನಗರ ಸಂಚಾರ ಪೋಲಿಸ್ ಠಾಣೆ)**

7. ವಾರ್ಡ ಸಂಖ್ಯೆ 168 ರ ವ್ಯಾಪ್ತಿಯ ಬರುವ ಖಾಲಿ ನಿವೇಶನದ ಜಾಗದಲ್ಲಿ ಕಸವನ್ನು ಹಾಕಿ Black spot ಆಗಿ ಪರಿವರ್ತನೆಯಾಗುತ್ತಿದ್ದು. ಸದರಿ ಸ್ವತ್ತಿಗೆ ಸಂಬಂದ ಪಟ್ಟ ಮಾಲೀಕರಿಗೆ ಸೂಚನೆ ನೀಡುವುದು ಹಾಗೂ ನಿವೇಶನ ಜಾಗದ ಸುತ್ತಲು fencing ಅಳವಡಿಸುವಂತೆ ತಿಳಿಸುವುದು. **(ಕಂದಾಯ ಇಲಾಖೆ ಬಿ.ಬಿ.ಎಂ.ಪಿ ಜಯನಗರ ಮತ್ತು ಸ.ಕಾ.ನಿ.ಅ, SWM, ಜಯನಗರ)**

ಕೊನೆಯದಾಗಿ ಅಧ್ಯಕ್ಷರು ಸಭೆಗೆ ಹಾಜರಾದ ಎಲ್ಲಾ ಸಾರ್ವಜನಿಕರಿಗೆ ಮತ್ತು ಅಧಿಕಾರಿಗಳಿಗೆ ವಂದನೆಯನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ಮುಂದಿನ ಸಭೆಯಲ್ಲಿ ಪೂರ್ಣ ಮಾಹಿತಿಯನ್ನು ಒದಗಿಸಬೇಕೆಂದು ಇಲಾಖಾ ಅಧಿಕಾರಿಗಳಿಗೆ ತಿಳಿಸುತ್ತಾ, ಸಭೆಯನ್ನು ವಂದನೆಗಳೂಂದಿಗೆ ಮುಕ್ತಾಯಗೊಳಿಸಲಾಯಿತು.

(ಶ್ರೀ ಚಂದ್ರಶೇಖರ್. ವಿ)
ಕಾರ್ಯಾದರ್ಶಿ ಮತ್ತು ಸಂಚಾಲಕರು
ವಾರ್ಡ-168 ರ ಸಮಿತಿ ಸಭೆ

ಪತ್ರಿಯನ್ನು:-

1. ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
2. ಮಾನ್ಯ ವಲಯ ಆಯುಕ್ತರು (ದಕ್ಷಿಣ), ಬಿ.ಬಿ.ಎಂ.ಪಿ ರವರ ಅವಗಾಹನೆಗೆ ಸಲ್ಲಿಸಿದೆ.
3. ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
4. ಕಛೇರಿ ಕಡತಕ್ಕೆ.

Scanned with CamScanner